# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2637/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 08/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಕೃಷ್ಣ ತಂದೆ ಚಂಗಪ್ಪ ಪಾಟೀಲ್, ಭಾಗ್ಯನಗರ, ಬೆಳಗಾವಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿರಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಕೃಷ್ಣ ಚಂಗಪ್ಪ ಪಾಟೀಲ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿಯ ಭಾಗ್ಯನಗರದಲ್ಲಿ ತಮ್ಮ ಮನೆಯ ಪಕ್ಕದ ಜಾಗದಲ್ಲಿ ಶ್ರೀ ವಿ.ಆರ್. ಅಗರ್‌ವಾಲ್ ಎಂಬುವವರು ಸೆಟ್ ಬ್ಯಾಕ್‌ಗಳನ್ನು ಬಿಡದೇ ಕಟ್ಟಡವನ್ನು ಕಟ್ಟುತ್ತಿದ್ದಾರೆಂದು, ಈ ಬಗ್ಗೆ ಎದುರುದಾರರಾದ ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅನೇಕ ಬಾರಿ ವಿನಂತಿಸಿಕೊಂಡಿದ್ದರೂ ಸಹ ಸದರಿಯವರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಸದರಿಯವರ ವಿರುದ್ಧ ಕ್ರಮ ಜರುಗಿಸಬೇಕೆಂದು ಮತ್ತು ಅಕ್ರಮವಾಗಿ ಕಟ್ಟುತ್ತಿರುವ ಕಟ್ಟಡ ಕಾಮಗಾರಿ ತಡೆಯಲು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದರೆ, ಸದರಿಯವರಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದ ನೋಟೀಸ್‌ನ ಸ್ವೀಕೃತಿಯು ಪಡೆಯಲಾಗಿರುತ್ತದೆ. ಆದ್ದರಿಂದ, ಎದುರುದಾರರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ. ಏತನ್ಮಧ್ಯೆ ಪ್ರಕರಣದ ದೂರಿನ ಪ್ರತಿಯನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿ ಅವರಿಂದ ವರದಿಯನ್ನು ಕೋರಲಾಗಿದ್ದು, ಅದರಂತೆ, ನಗರಾಭಿವೃದ್ಧಿ ಇಲಾಖೆಯವರು ಸದರಿ ದೂರಿನ ಪ್ರತಿಯನ್ನು ಮಹಾನಗರ ಪಾಲಿಕೆಯ ಆಯುಕ್ತರಿಗೆ ಕಳುಹಿಸಿದ್ದು, ಮಹಾನಗರ ಪಾಲಿಕೆಯ ಆಯುಕ್ತರು ಈ ಕಛೇರಿಗೆ ವರದಿಯನ್ನು ಸಲ್ಲಿಸಿದ್ದು, ಶ್ರೀ ವಿ.ಆರ್. ಅಗರವಾಲ್ ಇವರು ಬೆಳಗಾವಿಯ ಭಾಗ್ಯನಗರದ ಆರ್.ಎಸ್ ನಂ. 52/1/1/ಜೆ ಯ ಜಾಗದಲ್ಲಿ ಕಟ್ಟಡವನ್ನು

ನಿರ್ಮಾಣ ಮಾಡಿದ್ದು, ಸದರಿ ಕಟ್ಟಡ ಮಾಲೀಕರು ವಸತಿ ಕಟ್ಟಡದ ಉದ್ದೇಶಕ್ಕಾಗಿ ಪರವಾನಗಿಯನ್ನು ಪಡೆದಿರುತ್ತಾರೆ. ಸದರಿ ಪರವಾನಗಿಯಲ್ಲಿ 3.24 x 4.57 ಮೀ., ಅಳತೆಯ ಗ್ಯಾರೇಜ್ ನಿರ್ಮಾಣಕ್ಕೆ ಪರವಾನಗೆ ಪಡೆದಿದ್ದು, ಸದರಿ ಅಳತೆಗೆ ಮೀರಿ ಗ್ಯಾರೇಜ್ ಅನ್ನು ನಿರ್ಮಿಸಿರುತ್ತಾರೆ. ಆದ್ದರಿಂದ, ಸದರಿಯವರಿಗೆ ಕೆ.ಎಂ.ಸಿ ಕಾಯ್ದೆ ಕಲಂ 321(1) ಮತ್ತು (2) ರಡಿಯಲ್ಲಿ ಕಾರಣ ಕೇಳುವ ನೋಟೀಸ್ ಅನ್ನು ಹಾಗೂ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಲಾಗಿರುತ್ತದೆ. ಆದಾಗ್ಯೂ ಸದರಿಯವರು ಅನಧೀಕೃತವಾಗಿ ಕಟ್ಟಿದ ಗ್ಯಾರೇಜ್ ಅನ್ನು ತೆರವುಗೊಳಿಸದೇ ಇರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಇದಾದ ನಂತರ ದೂರುದಾರರಿಗೆ ಆಯುಕ್ತರು ನೀಡಿರುವ ವರದಿಯ ಪ್ರತಿಯನ್ನು ಕಳುಹಿಸಿ ಅವರಿಂದ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಬೆಳಗಾವಿ ಮಹಾನಗರ ಪಾಲಿಕೆಯ ಆಯುಕ್ತರು ಬೆಳಗಾವಿಯ ಭಾಗ್ಯನಗರದ ಆರ್‌ಎಸ್ ನಂ.52/ಜೆ (ಸಿಟಿಎಸ್ ನಂ.3154) ಪ್ಲಾಟ್‌ನಲ್ಲಿ ಇರುವ ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ನೋಟೀಸ್ ನೀಡಿದ್ದರೂ ಈ ಬಗ್ಗೆ ಇದುವರೆಗೆ ಯಾವುದೇ ಕ್ರಮವನ್ನು ಎದುರುದಾರರು ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3. ದೂರಿನಂಶಗಳನ್ನು, ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ತಿಳಿಸಿರುವಂತೆ ಬೆಳಗಾವಿಯ ಭಾಗ್ಯನಗರದ ಸರ್ವೆ ನಂ.52/ಜೆ (ಸಿಟಿಎಸ್‌ನಂ.3154ರಲ್ಲಿ) ರಲ್ಲಿ ಶ್ರೀ ವಿಜಯ ಕುಮಾರ್‌ರಾಮನಾಥ್ ಅಗರವಾಲ್ ಇವರು ಅನಧೀಕೃತವಾಗಿ ಗ್ಯಾರೇಜ್ ಅನ್ನು ನಿರ್ಮಾಣ ಮಾಡಿದ್ದು, ಅದನ್ನು ತೆರವುಗೊಳಿಸಲು ಮಹಾನಗರ ಪಾಲಿಕೆಯಿಂದ ನೋಟೀಸ್ ನೀಡಲಾಗಿದ್ದರೂ ಸಹ ಅದನ್ನು ಕಟ್ಟಡದ ಮಾಲೀಕರು ತೆರವುಗೊಳಿಸದೇ ಇದ್ದರೂ ಸಹ ಎದುರುದಾರರು ಮುಂದಿನ ಯಾವುದೇ ಕ್ರಮವನ್ನು ಜರುಗಿಸದೇ ಇರುವುದು ಸ್ಪಷ್ಟ ಪಡುತ್ತದೆ. ಇದಲ್ಲದೇ, ಎದುರುದಾರರು ದೂರಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಶ್ರೀ ವಿಜಯ ಕುಮಾರ್ ರಾಮನಾಥ್ ಅಗರವಾಲ್ ರವರಿಗೆ ಅನಧೀಕೃತವಾಗಿ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ನೀಡಿರುವ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಮಹಾನಗರ ಪಾಲಿಕೆಯ ಆಯುಕ್ತರು ತಮ್ಮ ದಿ:15/07/2014ರ ಪತ್ರದನ್ವಯ ಹೆಚ್ಚುವರಿಯಾಗಿ ನಿರ್ಮಿಸಿರುವ ಕಟ್ಟಡವನ್ನು ಸಕ್ರಮಗೊಳಿಸಿ, ಸದರಿ ಕಟ್ಟಡಕ್ಕೆ ದಂಡ ವಿಧಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಅವರು ಸಕ್ರಮಗೊಳಿಸಲು ತಮ್ಮಲ್ಲಿ ಇದ್ದ ಅಧಿಕಾರದ ಬಗ್ಗೆ ಯಾವುದೇ ಸುತ್ತೋಲೆಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿ ಮಹಾನಗರ ಪಾಲಿಕೆಯ ಆಯುಕ್ತರ ಪತ್ರದಲ್ಲಿ ತಿಳಿಸಿರುವ ಅಂಶವನ್ನು ಪರಿಗಣಿಸಲು ಬರುವುದಿಲ್ಲ.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿಯ ಭಾಗ್ಯನಗರದ ಸರ್ವೇ ನಂ.52/ಜೆ (ಸಿಟಿಎಸ್‌ನಂ.3154ರಲ್ಲಿ) ರಲ್ಲಿ ಶ್ರೀ ವಿಜಯ ಕುಮಾರ್‌ರಾಮನಾಥ್ ಅಗರವಾಲ್ ಇವರು ಅನಧೀಕೃತವಾಗಿ ಗ್ಯಾರೇಜ್ ಅನ್ನು ನಿರ್ಮಾಣ ಮಾಡಿದ್ದು, ಸದರಿ ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**